“ಏನಂತೀಯಾ, ಅನಿತಾ?”

ಎಂದು ಆಲ್ಬರ್ಟ್ ಹೇಳಿದಾಗ ಅನಿತಾ “ಪರ್ಫೆಕ್ಟ್, ಡಿಯರ್, ಐ ಲವ್ ಯು” ಎಂದು ಅವನ ತುಟಿಗೆ ತನ್ನ ತುಟಿಯನ್ನಿಟ್ಟಳು. ರವಿಶಂಕರ್ ನೋಡಿ ತಲೆ ತಗ್ಗಿಸಿದರು. ಪದ್ಮಾ ನೋಡಿದರೂ ನೋಡದಂತೆ ಮುಖ ತಿರುಗಿಸಿಕೊಂಡರು.

ಪೂರಾ ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದು ಬಂದಿದ್ದರು ರವಿಶಂಕರ್. ಅವರ ತಾತ ನೇಮ ನಿಷ್ಠೆಗೆ ಅವರ ಬೀದಿಗೇ ಹೆಸರಾದವರು. ಅವರ ಮನೆ ದೇವಾಲಯದಂತಿತ್ತು. ಪದ್ಮಾ ಜೊತೆ ಮದುವೆ ಗೊತ್ತಾದಾಗ ಹುಡುಗ ಹುಡುಗಿ ಮದುವೆಯ ಮುಂಚೆ ಮಾತನಾಡಬೇಕಾದ ಅವಶ್ಯಕತೆ ಇಲ್ಲ ಎಂದು ಸಾಧಿಸಿದ್ದರು ಅವರ ತಾಯಿ. ರವಿಶಂಕರ್ ಗುಟ್ಟಾಗಿ ಪದ್ಮಾ ಅವರನ್ನು ಸಂಧಿಸುತ್ತಿದ್ದರು. ಆದರೆ ಅವರನ್ನು ಮುಟ್ಟುವ ಧೈರ್ಯ ಇರಲಿಲ್ಲ. ಈಗ ತಮ್ಮ ಕಣ್ಣಿನ ಮುಂದಾಗುತ್ತಿರುವುದನ್ನು ನಂಬುವುದೂ ಅಸಾಧ್ಯ ಎನಿಸಿತು. ಅವರತ್ತ ನೋಡುವುದಾದರೂ ಹೇಗೆ ಎನಿಸಿತು.

ಸಂಜೆ ಏಳಕ್ಕೆ ಊಟ ಎಂಬ ನಿರ್ಧಾರವಾಯಿತು. ಮನೆಯ ಲೌಂಜಿನಲ್ಲಿಯೇ ಎಲ್ಲರೂ ಕುಳಿತರು. ಆಲ್ಬರ್ಟ್ “ನನಗ್ಯಾಕೋ ಕಾಲು ನೋಯುತ್ತಿದೆ. ಹನ್ನೆರಡು ಗಂಟೆ ಒಂದೇ ಸಮ ಪ್ಲೇನಿನಲ್ಲಿ ಕೂತಿದ್ದು.” ಎಂದ. ಕೂಡಲೇ ಅನಿತಾ “ಕಾಲು ಚಾಚಿಕೊಂಡು ಕೂರು ಪರವಾಗಿಲ್ಲ” ಎಂದಳು. ಅವನು ಕಾಲುಗಳನ್ನು ಅವಳ ತೊಡೆಯ ಮೇಲೇ ಹಾಕಿದ. ಅವಳು ಮೃದುವಾಗಿ ಅವನ್ನು ಅಮುಕಲಾರಂಭಿಸಿದಳು.

ತಂದೆ ತುಸು ವಾಕಿಂಗ್ ಹೋಗುವುದಾಗಿ ಹೊರಹೋದರು. ತಾಯಿ ಕೆಲಸ ಇದೆ ಎಂದು ಅಡಿಗೆ ಮನೆಗೆ ಹೋದರು. ಲೌಂಜಿನಿಂದ ಆಗಾಗ ಕೇಕೆ ಕೇಳಿಬಂತು.

‘ಇಷ್ಟೆಲ್ಲಾ ಆದ ಮೇಲೆ ಮದುವೆ ಆಗೋದು ಗ್ಯಾರೆಂಟಿ. ಹುಡುಗ ಚೆನ್ನಾಗಿದಾನೆ, ಓದಿದ್ದಾನೆ, ಬುದ್ಧಿವಂತ. ಇಬ್ಬರೂ ಅಮೆರಿಕಾದಲ್ಲೇ ಮದುವೆ ಮಾಡಿಕೊಂಡು ಇಲ್ಲಿಗೆ ಬಂದಿದ್ದರೆ ಚೆನ್ನಾಗಿರೋದು’ ಇದು ತಾಯಿಯ ಆಲೋಚನಾ ಲಹರಿ.

ಏಳು ಗಂಟೆ ಆಯಿತು. ರವಿ ಶಂಕರ್ ‘ವಾಕಿಂಗ್’ ಮುಗಿಸಿ ಬಂದರು. ಪದ್ಮಾ ತಾವು ತಯಾರಿಸಿದ್ದ ಅಡಿಗೆಗಳನ್ನು ಡೈನಿಂಗ್ ಟೇಬಲ್ಲಿನ ಮೇಲೆ ಇಟ್ಟು, ಎಲ್ಲರಿಗೂ ತಟ್ಟೆ, ಲೋಟ, ನೀರುಗಳನ್ನು ಅಲಂಕಾರವಾಗಿ ಜೋಡಿಸಿದರು.

ನೋಡಿದ ತಕ್ಷಣ ಅನಿತಾ “ಏನಮ್ಮಾ, ಇಷ್ಟೆಲ್ಲಾ ಮಾಡಿದ್ದೀಯಾ? ಇವನ್ನೆಲ್ಲಾ ತಿಂದರೆ ಒಂದು

